# ಭಗವದ್ರಾಮಾನುಜರ ಭಗವದ್ಗೀತಾಭಾಷ್ಯದ ಸಾರಸಂಗ್ರಹ

**ವೇದವಾರಿಧಿ ಡಾ. ಪಿ. ರಾಮಾನುಜನ್, ಬೆಂಗಳೂರು**

ಕರ್ನಾಟಕದ ಶ್ರೀರಾಮನಾಥಪುರದ ಶ್ರೀವೈಷ್ಣವರ ಪ್ರಾರ್ಥನೆಯ ಮೇರೆಗೆ ಭಗವದ್ರಾಮಾನುಜರ ದಿವ್ಯಜನ್ಮಸಹಸ್ರಾಬ್ದಿಯ ಶುಭಸಂದರ್ಭದಲ್ಲಿ ಹೊರಬರಲಿರುವ ಸ್ಮರಣಸಂಚಿಕೆಗಾಗಿ ಮೇಲ್ಕಂಡ ಶೀರ್ಷಿಕೆಯಲ್ಲಿ ದಾಸನೂ ಆಚಾರ್ಯರ ವ್ಯಾಖ್ಯಾನದ ವೈಶಿಷ್ಟ್ಯದ ಕೆಲವು ಅಂಶಗಳನ್ನು ವಿಜ್ಞಾಪಿಸಿ ಕೃತಾರ್ಥನಾಗ ಬಯಸುತ್ತೇನೆ.

ಭಗವದ್ಯಾಮುನಮುನಿಗಳ ಸಂಕ್ಷಿಪ್ತ ಗೀತಾರ್ಥಸಂಗ್ರಹದ ಆಧಾರದ ಮೇಲೆ ಭಗವದ್ಭಾಷ್ಯಕಾರರು ತಮ್ಮ ಗೀತಾಭಾಷ್ಯವನ್ನು ರಚಿಸಿರುತ್ತಾರೆ. ಶ್ರೀಮದ್ಯಾಮುನಮುನಿಗಳ ಗೀತಾರ್ಥಸಂಗ್ರಹದಲ್ಲಿ ಒಟ್ಟು 32 ಶ್ಲೋಕಗಳಿವೆ. ಅದರಲ್ಲಿ ಮೊದಲ ಶ್ಲೋಕದಲ್ಲಿ ಮಂಗಳಾಚರಣೆ, ಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಡುವ ವಿಷಯದ ಸಂಕ್ಷಿಪ್ತ ಸೂಚನೆ. 2, 3, 4 ಶ್ಲೋಕಗಳಲ್ಲಿ ಕ್ರಮವಾಗಿ ಗೀತೆಯ ಮೊದಲ, ಎರಡನೇಯ ಮತ್ತು ಮೂರನೇಯ ಷಟ್ಕ (ಆರು ಅಧ್ಯಾಯ) ಗಳಲ್ಲಿ ಪ್ರತಿಪಾದಿಸಿರುವ ವಿಷಯ. ನಂತರ, 5 ರಿಂದ 22ರ ವರೆಗೆ 18 ಅಧ್ಯಾಯ ಉಳ್ಳ ಗೀತೆಯ ಒಂದೊಂದು ಅಧ್ಯಾಯದ ಸಾರಾಂಶ ಹೇಳಲ್ಪಟ್ಟಿದೆ, ಮುಂದಿನ 10 ಶ್ಲೋಕಗಳಲ್ಲಿ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ ಮುಂತಾದವುಗಳ ಸ್ವರೂಪ ಮುಂತಾದವುಗಳು ಹೇಳಲ್ಪಟ್ಟಿವೆ.

ಶ್ರೀಭಾಷ್ಯಕಾರರು, ತಮ್ಮ ಗೀತಾಭಾಷ್ಯದ ಪ್ರಾರಂಭದಲ್ಲೇ ಒಂದು ದೀರ್ಘ ಮತ್ತು ಸೊಗಸಾದ ಗದ್ಯಭಾಗದಲ್ಲಿ, ಭಗವಂತನ ಸ್ವರೂಪ, ರೂಪ, ಗುಣ, ವಿಭವ, ಲೀಲೆ ಮುಂತಾದವುಗಳನ್ನು ಮನಮುಟ್ಟುವಂತೆ, ತಮ್ಮ ಭಾಷ್ಯಕ್ಕೆ ಉಪೋದ್ಘಾತವನ್ನಾಗಿ ಅನುಗ್ರಹಿಸಿದ್ದಾರೆ. ಅದರಂತೆ ಪರಬ್ರಹ್ಮ, ಪುರುಷೋತ್ತಮ, ಶ್ರಿಯಃಪತಿಯಾದ ಶ್ರೀಮನ್ನಾರಾಯಣನು, ಯಾವ ದೋಷಗಳ ಗಂಧವೇ ಇಲ್ಲದೆಯೂ, ಎಲ್ಲಾ ಮಂಗಳಗುಣಗಣಗಳ ಗಣಿಯಾಗಿಯೂ, ವೇದಾಂತಗಳಲ್ಲಿ ಘೋಷಿಸಲ್ಪಟ್ಟಿದ್ದಾನೆ. ಅವನೇ ಜಗತ್ತಿಗೆ ಸೃಷ್ಟಿ, ಸ್ಥಿತಿ, ಸಂಹಾರ, ಚೇತನರ ಪ್ರವೃತ್ತಿ, ನಿವೃತ್ತಿಯೆಂಬ ಸಂಸಾರ ಬಂಧ ಮತ್ತು ಅದರಿಂದ ಮುಕ್ತಿ ಮುಂತಾದವುಗಳಿಗೆ ಏಕೈಕ ಕಾರಣನಾಗಿರುವನು. ಅವನು ಸಜೀವ, ನಿರ್ಜೀವ ರೂಪವಾದ ಸಮಸ್ತ ಜಗತ್ತಿಗೂ ಆತ್ಮನಾಗಿ, ಅವುಗಳು ಅವನಿಗೆ ಶರೀರವಾಗಿವೆಯಾದ್ದರಿಂದ ಅವನನ್ನು ಬಿಟ್ಟಿರಲಾರದ ಸಂಬಂಧದ ಕಾರಣ ಅವನು ಚೇತನಾಚೇತನ ವಿಶಿಷ್ಟ ಪರತತ್ತ್ವವಾಗುತ್ತಾನೆ. ಅವನಿಗೆ ದಾಸರಾದ ಅನಂತಕೋಟಿ ಜೀವಾತ್ಮರು ಅವನಿಗೆ ನಿರಂತರವಾಗಿ ಅಳಿವಿಲ್ಲದ ಪರಮಾಕಾಶವೆಂಬ ಶ್ರೀವೈಕುಂಠದಲ್ಲಿ ನಿರ್ದುಷ್ಟ ಸೇವೆ ಮಾಡುವುದೇ ಪರಮಪುರುಷಾರ್ಥವಾದ ಮೋಕ್ಷವೆನಿಸುವುದೆಂದೂ, ಅದನ್ನು ಪಡೆಯಲು ಸಾಧನವಾಗಿ ಕರ್ಮಯೋಗ, ಜ್ಞಾನಯೋಗಗಳಿಂದ, ಪೋಷಿಸಲ್ಪಟ್ಟ ಭಕ್ತಿಯೋಗವನ್ನೂ ಮತ್ತು ಕೊನೆಯದಾಗಿ ಅವನನ್ನೇ ಶರಣ ಹೊಂದುವ ಉಪಾಯವನ್ನೂ ವಿಸ್ತಾರವಾಗಿ ಉಪದೇಶಿಸಿದ್ದೇ ಭಗವದ್ಗೀತೆಯಾಗಿದೆ.

ತ್ರೇತಾಯುಗದಲ್ಲಿ, ವೇದವೇದ್ಯನಾದ ಶ್ರೀರಾಮಚಂದ್ರನು, ದಶರಥ ಚಕ್ರವರ್ತಿಯ ಮಗನಾಗಿ ಅವತರಿಸಿದಾಗ, ಅವನನ್ನು ಪ್ರತಿಪಾದಿಸುವ ವೇದವು, ಪ್ರಾಚೇತಸರಾದ ಶ್ರೀಮದ್ವಾಲ್ಮೀಕಿಮಹರ್ಷಿಯಿಂದ, ರಾಮಾಯಣವಾಗಿ ಅವತರಿಸಿತ್ತು. ಇಲ್ಲಿಯಾದರೋ, ದ್ವಾಪರಯುಗದಲ್ಲಿ, ಶ್ರೀಕೃಷ್ಣನ ಅವತಾರಕಾಲದಲ್ಲಿ, ಅವನೇ ತನ್ನನ್ನು ವಿಷಯವಾಗಿ ಕೊಂಡಿರುವ ಉಪನಿಷತ್ತುಗಳನ್ನೆಲ್ಲ ಹಸುಗಳಂತೆಯೂ, ತಾನು ಹಾಲು ಕರೆಯುವ ಗೋಪಾಲನಾಗಿಯೂ, ಅರ್ಜುನನ್ನು ಕರುವಾಗಿಯೂ, ಬಳಸಿಕೊಂಡು, ಗೀತೆಯೆಂಬ ಅಮೃತವನ್ನು ಹಾಲಾಗಿ ಕರೆದನು. ತ್ರೇತೆಯಲ್ಲಿ ವೇದ ವಾಲ್ಮೀಕಿಯಿಂದ ಅವತರಿಸಿತು. ದ್ವಾಪರದಲ್ಲಿ ಶ್ರೀಕೃಷ್ಣ ಗೀತೆಯನ್ನು ಅವತಾರಮಾಡಿಸಿದನು. ಭೂಮಿದೇವಿಯು ಅಹಂಕಾರಿಗಳಾದ ರಾಜರೆಂಬ ಹೆಸರಿನಲ್ಲಿ ಕಂಸಾದಿ ಆಸುರ ಪ್ರಕೃತಿಗಳು ಹೆಚ್ಚಿದರಿಂದ, ಅವರುಗಳ ಭಾರವನ್ನನುಭವಿಸಲಾರದೆ, ಭಗವಂತನಲ್ಲಿ ಶರಣು ಹೊಂದಿದಾಗ, ಆ ಭೂಭಾರವನ್ನು ನೀಗಿಸಲು ಎಂಬ ನೆವದಿಂದ, ವೇದಾಂತೋಪದೇಶ ಮಾಡಲೂ, ದೈವಪ್ರಕೃತಿಗಳಾದ ಅನನ್ಯಭಕ್ತರು

ತನ್ನನ್ನು ಆರಾಧಿಸಲೂ ಅನುವಾಗುವಂತೆ, ಶುದ್ಧಸತ್ವಮಯವಾದ ತನ್ನ ಸ್ವರೂಪ ಗುಣಾದಿಗಳು ಬದಲಾಗದೆಯೇ ಅವತರಿಸಿ (ಆಯಾ ಶರೀರಗಳಲ್ಲಿ ಹುಟ್ಟಿದಂತೆ ತೋರಿ) ಲೋಕಕಲ್ಯಾಣವನ್ನು ಸಾಧಿಸುವನು.

ಭಗವದ್ಗೀತೆಯಲ್ಲಿ 18 ಅಧ್ಯಾಯಗಳಿವೆ. ಮೊದಲ ಆರು ಅಧ್ಯಾಯಗಳಲ್ಲಿ ಆತ್ಮಸ್ವರೂಪವನ್ನು ನೋಡುವ ದಾರಿ ವಿಸ್ತಾರವಾಗಿ ಹೇಳಿದೆ. 7 ರಿಂದ 12 ಅಧ್ಯಾಯಗಳಲ್ಲಿ ಭಕ್ತಿಯೋಗವೂ, ಅದಕ್ಕೆ ಬೇಕಾದ ಭಗವಂತನ ಬಗ್ಗಿನ ಜ್ಞಾನವೂ ಹೇಳಲ್ಪಟ್ಟಿದೆ. ಕೊನೆಯ ಆರು ಅಧ್ಯಾಯಗಳಲ್ಲಿ ಕೆಳಗೆ ಸಂಕ್ಷೇಪವಾಗಿ ಹೇಳಿದ ಕೆಲ ವಿಷಯಗಳನ್ನು ಬಹಳ ವಿಸ್ತಾರವಾಗಿ ಹೇಳಿದೆ.

ಮೊದಲ ಷಟ್ಕದ ಮೊದಲ ಅಧ್ಯಾಯ ಮತ್ತು ಎರಡನೇಯ ಅಧ್ಯಾಯದ ಮೊದಲ 11 ಶ್ಲೋಕಗಳು, ಈ ಗೀತೆಯು ಯಾರಿಂದ, ಯಾರಿಗೆ, ಯಾವ ಜಾಗದಲ್ಲಿ, ಯಾವಾಗ, ಏತಕ್ಕಾಗಿ ಹೇಳಲ್ಪಟ್ಟಿತು ಎಂಬುದನ್ನು ತಿಳಿಸುತ್ತವೆ. ಇದು ಭಾಷ್ಯದ ಅವತಾರಿಕೆಯಲ್ಲಿ ಹೇಳಲ್ಪಟ್ಟಿದೆ. ಎರಡನೇಯ ಅಧ್ಯಾಯದ 12 ರಿಂದ 30 ಶ್ಲೋಕಗಳ ವರೆಗೆ ಆತ್ಮಸ್ವರೂಪವನ್ನು ಭಗವಂತ ಉಪದೇಶಿಸುವನು. ಆತ್ಮನಿಗೆ ಅಳಿವಿಲ್ಲ. ದೇಹವು ಅಳಿಯುವ ಸ್ವಭಾವದ್ದು. ಆದ್ದರಿಂದ ದೇಹಕ್ಕಿಂತ ಆತ್ಮಾ ಬೇರೆ ಎಂಬುದನ್ನು ಹಲವು ಯುಕ್ತಿಗಳಿಂದ ಸ್ಪಷ್ಟಪಡಿಸಿದ್ದಾನೆ. ಜೀವಾತ್ಮನ ಭಗವಂತನಿಗೆ ಅಧೀನನಾಗಿರುವಿಕೆ, ಭಗವತ್ಪ್ರೀತಿಗಾಗಿಯೇ ಇರುವಿಕೆ ಇಲ್ಲಿ ಹೇಳದಿದ್ದರೂ ಅವುಗಳೂ ಅರಿಯತಕ್ಕವು.

ಮುಂದೆ 2-47 ನೇಯ ಶ್ಲೋಕದಲ್ಲಿ, ಆತ್ಮಜ್ಞಾನದೊಡನೆ ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡಬೇಕೆಂದು ಹೇಳಿದೆ. ಕರ್ಮವನ್ನು ಎರಡು ಭಾವನೆಗಳೊಡನೆ ಮಾಡಬೇಕಾದದ್ದು -

1. ಈ ಕರ್ಮ (ಯಜ್ಞ ಮಂತಾದ ಕೆಲಸ) ವನ್ನು ಭಗವಂತನನ್ನು ಸಂತೋಷಪಡಿಸಲು ಮಾಡುತ್ತಿರುವೆನು. ಈ ಭಾವನೆ, ಆತ್ಮಾ ಶರೀರಕ್ಕಿಂತ ಬೇರೆಯೆಂದೂ, ಅದೂ ಮತ್ತು ಅದಕ್ಕೆ ಸೇರಿದವೂ ನನ್ನದಲ್ಲ, ಅವು ನನಗೆ ಬೇಕಿಲ್ಲ, ಅವುಗಳಿಗಾಗಿ ನಾನು ಶ್ರಮಿಸಬೇಕಿಲ್ಲ, ಆದ್ದರಿಂದ ಭಗವದಾಜ್ಞೆಯಿಂದ ಮಾಡುವ ಆ ಕರ್ಮವೇ ನನಗೆ ಪ್ರಯೋಜನ. ಅದರಿಂದ ಬರುವ ಸ್ವರ್ಗ ಮುಂತಾದ ಫಲದಲ್ಲಿ ನನಗೆ ಇಚ್ಛೆಯಿಲ್ಲ ಎಂಬ ಚಿಂತನೆಯಿಂದ ಬರುವುದು. ಇದನ್ನು 2-71 ಶ್ಲೋಕದಲ್ಲಿ ಹೇಳುವನು.

2. ಈ ಕರ್ಮವನ್ನು ನಾನು ಮಾಡುತ್ತಿಲ್ಲ ಎಂಬ ಭಾವನೆಯೊಡನೆ - ಅಂದರೆ, ನಾನು (ಆತ್ಮ), ಜ್ಞಾನಸ್ವರೂಪನಾದ್ದರಿಂದ, ಕರ್ಮಸಂಬಂಧದಿಂದ ಬಂದ ಶರೀರ ಕಳೆದಾಗ ಈ ರೀತಿಯ ಕೆಲಸಗಳನ್ನು ಮಾಡೆನು. ಶರೀರಸಂಬಂಧವೇ ಕರ್ಮದ ಅನುಷ್ಠಾನಕ್ಕೆ ಕಾರಣ. ಮತ್ತೆ ಕರ್ಮವನ್ನು ನಾನಾಗಿ (ಸ್ವತಂತ್ರನಾಗಿ) ಮಾಡಲಿಲ್ಲ, ದೈವವು ನನ್ನಿಂದ ಮಾಡಿಸುತ್ತದೆ ಎಂದು.

ಹೀಗೆ ಎಲ್ಲ ಕರ್ಮಗಳನ್ನೂ ಮಾಡಬೇಕಾದ ಒಬ್ಬೊಬ್ಬ ಸಾಧಕನೂ, ತನಗೆ ಹಿಡಿಸಿದ್ದೂ, ತನ್ನಿಂದ ಸಾಧ್ಯವೂ ಆದ ಒಂದು ಶಾಸ್ತ್ರೀಯ ಕರ್ಮವನ್ನು ಮೋಕ್ಷಕ್ಕೆ ಸಾಧನವಾಗಿ, ಆತ್ಮವನ್ನು ನೋಡುವ ವರೆಗೆ, ಬಿಡದೆ ಮಾಡಿ ಕೊಂಡು ಬರುವುದು. ಮಿಕ್ಕ ವಿಹಿತ ಕರ್ಮಗಳನ್ನು ಇದಕ್ಕೆ ಉಪಕಾರಕವಾಗಿ (ಅಂಗವಾಗಿ) ಮಾಡಿದರೆ ಇಂತಹ ಕರ್ಮಕ್ಕೆ ಕರ್ಮಯೋಗ ಎಂದು ಹೆಸರು. ಇವುಗಳಿಂದ ಪ್ರೀತನಾದ ಭಗವಂತ ಸಂತೋಷಗೊಂಡು, ರಜಸ್, ತಮಸ್ ಎಂಬ ಗುಣಗಳನ್ನು ಕಡಿಮೆ ಮಾಡಿ, ಸತ್ವಗುಣ ಹೆಚ್ಚುವಂತೆ ಮಾಡಿ, ಕರ್ಮಯೋಗವನ್ನು ವೃದ್ಧಿಗೊಳಿಸುತ್ತಾನೆ. ಹೀಗೇ ಕರ್ಮಯೋಗ ಮಾಡುತ್ತ ಕ್ರಮೇಣ ಇಂದ್ರಿಯಾನುಭವಗಳಲ್ಲಿ ಬೇಸರ ಬಂದು, ಆತ್ಮಜ್ಞಾನವು ಸ್ಥಿರವಾಗುವುದು. ಆಗ ಕರ್ಮಯೋಗಿಯು ಆತ್ಮಧ್ಯಾನವನ್ನು ಮಾಡಿ ಅದರ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಇದು 52-53 ಶ್ಲೋಕಗಳಲ್ಲಿ ಹೇಳಿದೆ.

ಈ ಕರ್ಮಯೋಗದ ವಿಚಾರವನ್ನೇ ಭಗವಂತನಾದ ಶ್ರೀಕೃಷ್ಣನು ಆರನೇಯ ಅಧ್ಯಾಯದ ವರೆಗೆ ವಿವರಿಸಿ ಹೇಳುವನು. ಆತ್ಮಜ್ಞಾನವು ಸ್ಥಿರವಾಗುವುದೆಂದು ಶ್ರೀಕೃಷ್ಣ ಹೇಳಿದ ಕೂಡಲೇ, ಅರ್ಜುನನು ಸ್ಥಿರಪ್ರಜ್ಞನು ಹೇಗಿರುವನೆಂದು ಕೇಳಲು, 2-55 ರಿಂದ ನಾಲ್ಕು ಶ್ಲೋಕಗಳಲ್ಲಿ ಅವನ ಲಕ್ಷಣಗಳನ್ನು ಹೇಳಿ, ಇಂದ್ರಿಯಗಳನ್ನು ಅಡಗಿಸದವರಿಗೆ ಈ ಸ್ಥಿತಿ ಬಾರದೆಂದು 2-59

ರಿಂದ 10 ಶ್ಲೋಕಗಳಲ್ಲಿ ತಿಳಿಸುವನು. ಆದರೂ, ಅರ್ಜುನನು, ನಾನೇಕೆ ಜ್ಞಾನಯೋಗವನ್ನು ಮಾಡಬಾರದೆಂದು ಕೇಳಲು, ನಿನ್ನಿಂದ ಸಾಧ್ಯವಲ್ಲವಾದ್ದರಿಂದ ನೀನದನ್ನು ಮಾಡ ಬಾರದು. ನೀನು ಕರ್ಮಯೋಗವನ್ನೇ ಮಾಡು ಎಂದು ಹಲವು ಕಾರಣಗಳಿಂದ ಮೂರನೇಯ ಅಧ್ಯಾಯದಲ್ಲೂ, ನಾಲ್ಕನೇಯ ಅಧ್ಯಾಯದ ಮೊದಲ ಮೂರು ಶ್ಲೋಕಗಳಿಂದಲೂ, ಐದನೇ ಅಧ್ಯಾಯದ ಮೊದಲ ಏಳು ಶ್ಲೋಕಗಳಿಂದಲೂ, ಆರನೇಯ ಅಧ್ಯಾಯದ ಮೊದಲ ಆರು ಶ್ಲೋಕಗಳಿಂದಲೂ ಸ್ಥಾಪಿಸುವನು. ಇವನ್ನು ನಾಲ್ಕನೇಯ ಮತ್ತು ಐದನೇಯ ಅಧ್ಯಾಯಗಳ ಅವತಾರಿಕೆಯಲ್ಲಿ ಕಾಣಬಹುದು.

ಕರ್ಮಯೋಗದಲ್ಲಿ ಎರಡು ಭಾವನೆಗಳೊಡನೆ ಮಾಡಬೇಕೆಂದು ಕೆಳಗೇ ಹೇಳಿತು. ಅದರಲ್ಲಿ ಮೊದಲ ಭಾವನೆಯೊಡನೆ ಕರ್ಮಯೋಗ ಮಾಡುವವನು ಹೇಗಿರುವನೆಂದು 4-19 ರಿಂದ ಐದು ಶ್ಲೋಕಗಳಲ್ಲಿ ವಿವರಿಸಿದೆ. ಅವನಿಗೆ ಯಾವ ಫಲದಲ್ಲೂ ಆಸೆಯಿಲ್ಲ, ವಿಷಯಗಳಲ್ಲಿ ಆಸಕ್ತಿ ಇಲ್ಲ, ಅವುಗಳಲ್ಲಿ ಮನಸ್ಸು ಹೋಗದೆ ತಡೆಯುವನು. ಅವನಿಗೆ ಆತ್ಮನಲ್ಲಿ ಮಾತ್ರ ಸಂತೋಷವಿದೆ. ಆಹಾರದ ವಿಷಯದಲ್ಲಿ ಚಿಂತೆಯಿಲ್ಲ. ಇದು ಬೇಕು, ಅದು ಬೇಕು ಎಂಬ ಆಸೆಗಳಿಲ್ಲ. ದೇಹಧಾರಣಕ್ಕಾಗಿ ಸಿಕ್ಕಿದ್ದನ್ನು ತಿನ್ನುವನು. ಕರ್ಮಗಳನ್ನು ಮಾಡಿದರೂ, ಆತ್ಮಜ್ಞಾನವನ್ನೇ ಅಭ್ಯಸಿಸುವನು. ಅವನ ಕರ್ಮಗಳಲ್ಲಿ ಆತ್ಮಜ್ಞಾನ ಸೇರಿದೆ. ಕೊನೆಯಲ್ಲಿ ವಿಷಯಗಳಲ್ಲಿ ಸಂಗ ತಾನಾಗಿಯೇ ಅವನಿಂದ ಬೇರಾಗುವುದು.

ಎರಡನೇಯ ಭಾವನೆ, ನಾನು ಕರ್ಮಗಳನ್ನು ಮಾಡುತ್ತಿಲ್ಲವೆಂಬುದು. ಇದನ್ನು 5-8 ರಿಂದ ಎಂಟು ಶ್ಲೋಕಗಳಲ್ಲೂ, 18-13 ರಿಂದ ಐದು ಶ್ಲೋಕಗಳಲ್ಲೂ ಹೇಳಿದೆ. ಯಾವುದೇ ಕೆಲಸವನ್ನೂ ಶರೀರ, ಇಂದ್ರಿಯಗಳು, ಪ್ರಾಣವಾಯು, ಜೀವಾತ್ಮ ಮತ್ತು ಭಗವಂತ (ಪರಮಾತ್ಮ) ಎಂಬ ಐವರೂ ಸೇರಿಯೇ ಮಾಡುತ್ತಾರಾದ್ದರಿಂದ ಯಾವೊಬ್ಬನೂ ತಾನೊಬ್ಬನೇ ಆ ಕೆಲಸವನ್ನು ಮಾಡುವೆನೆಂದು ನೆನೆಸಕೂಡದು. ಜೀವಾತ್ಮ ಶರೀರದೊಡನೆಯೂ, ಇಂದ್ರಿಯಗಳೊಡನೆಯೂ, ಪ್ರಾಣನೊಡನೆಯೂ ಸೇರಿರುವುದರಿಂದ, ಅವುಗಳಿಂದ ಪ್ರೇರಿಸಲ್ಪಟ್ಟು ಕೆಲಸಗಳನ್ನು ಮಾಡುತ್ತಾನೆ. ಹಾಗೆಯೇ ಅವುಗಳೂ ಭಗವಂತನಿಂದ ಪ್ರಚೋದಿಸಲ್ಪಟ್ಟು ಅವನನ್ನು ಪ್ರೇರಿಸುತ್ತವೆ. ನಾನು ಮಾಡುತ್ತಿಲ್ಲ ಎಂಬುದಕ್ಕೆ ಇದೇ ತಾತ್ಪರ್ಯ, ಈ ಎರಡು ಭಾವನೆಗಳೊಡನೆ ಕರ್ಮಗಳನ್ನು ಮಾಡುತ್ತ ಆತ್ಮಜ್ಞಾನವು ಅಭ್ಯಸ್ತವಾಗುವುದು.

ಹೀಗೆ ಕರ್ಮಯೋಗದ ಸ್ವರೂಪವನ್ನು ಉಪದೇಶಿಸಿ, ಅದರ ವಿಭಾಗಗಳನ್ನು 4-25 ರಿಂದ ಎಂಟು ಶ್ಲೋಕಗಳಲ್ಲಿ ಹೇಳುತ್ತಾನೆ. ಹದಿಮೂರು ವಿಭಾಗಗಳಿವೆ. ಎಲ್ಲವಕ್ಕೂ ಫಲ ಒಂದೇ ಆದ್ದರಿಂದ, ಅವುಗಳಲ್ಲಿ ಯವುದಾದರೊಂದನ್ನು ಮಾಡ ಬಹುದು. ಇವುಗಳಲ್ಲಿ ಕರ್ಮವೂ, ಆತ್ಮಜ್ಞಾನವು ಸೇರಿವೆ. ಅದರಲ್ಲಿ ಜ್ಞಾನವೇ ಶ್ರೇಷ್ಠ ಎಂದು 4-33 ಶ್ಲೋಕದಲ್ಲಿ ಹೇಳಿರುವನು.

ಕರ್ಮಯೋಗದಿಂದ ಆತ್ಮಜ್ಞಾನ ಸ್ಥಿರವಾಗುವುದೆಂದು ಹೇಳಿದೆವು. ಹೀಗೆ ಸ್ಥಿರವಾಗಿರುವುದಕ್ಕೆ ಕೇಲವು ಗುರುತುಗಳನ್ನು 6-7 ರಿಂದ ಮೂರು ಶ್ಲೋಕಗಳಲ್ಲಿ ಹೇಳಿದೆ. ಅವು - ಕರ್ಮಯೋಗಿಯು ಸುಖ, ದುಃಖ, ಬಹುಮಾನ, ಅಪಮಾನ, ಸಂತೋಷಾದಿಗಳಿಲ್ಲದಿರುವನು. ಅವನ ಮನಸ್ಸು ಕ್ಷೋಭೆಗೊಳ್ಳದೆ, ತಿಳಿಯಾಗಿರುತ್ತದೆ. ಅವನು ಬಯಸುವುದು ಆತ್ಮವೊಂದನ್ನೇ. ಅವನಿಗೆ ಚಿಪ್ಪೂ, ಕಲ್ಲೂ, ಚಿನ್ನವೂ ಒಂದೇ. ಅವನಿಗೆ ಬೇಕಾದವನು, ಬೇಡದವನೆಂಬುದಿಲ್ಲ. ಎಲ್ಲರನ್ನೂ ಸಮವಾಗಿ ನೋಡುತ್ತ ಆತ್ಮಧ್ಯಾನಕ್ಕೆ ಅಧಿಕಾರಿಯಾಗುವನು.

ಆತ್ಮಧ್ಯಾನವನ್ನು ಹೇಗೆ ಮಾಡಬೇಕೆಂದು 6-10 ರಿಂದ ಹತ್ತು ಶ್ಲೋಕಗಳಲ್ಲೂ, 6-24 ರಿಂದ ಐದು ಶ್ಲೋಕಗಳಿಂದಲೂ ಹೇಳಲ್ಪಟ್ಟಿದೆ. 6-20 ರಿಂದ 6-23 ವರೆಗೆ ಆತ್ಮಧ್ಯಾನ ಮಾಡುವಾಗ, ಅವನ ಮನಸ್ಸಿಗೆ ಇದೇ ಉತ್ತಮವಾದ ಸುಖ, ಇದನ್ನು ಬಿಟ್ಟು ಬೇರಾವುದೂ ಹಿಡಿಸದೆ, ಸಂತೋಷಪಡುವನು. ಇಂದ್ರಿಯಗಳಿಗೆ ಎಟುಕದ ಸುಖವನ್ನು ಅನುಭವಿಸುವನು. ಒಂದು ಕ್ಷಣ ಕೂಡ ಆ ಯೋಗವನ್ನು ನಿಲ್ಲಿಸಲಿಷ್ಟವಿಲ್ಲದೆ, ನಿಂತು ಹೋದರೂ ಮತ್ತೆ ಅದನ್ನೇ ಮಾಡ ಬಯಸಿ, ಬೇರಾವ ಸುಖಗಳ

ಆಸೆಯೋ, ದೊಡ್ಡ ದುಃಖಗಳಿಂದ ವಿಚಲಿತನಾಗುವುದೋ ಇಲ್ಲದಿರುವನು ಎಂದು ತಿಳಿಸಿದೆ. ಹೀಗೇ ಆತ್ಮಸಾಕ್ಷಾತ್ಕಾರವನ್ನು ಸತತವಾಗಿ ಅಭ್ಯಾಸ ಮಾಡುತ್ತ ಅದು ಬಲಿಯುವುದು. ಅದರಲ್ಲಿ ನಾಲ್ಕು ಮೆಟ್ಟಲುಗಳಿವೆ.

1. ಮೊದಲನೇಯ ಮೆಟ್ಟಲಲ್ಲಿ, ಯೋಗಿಯು ತನ್ನ ಸ್ವರೂಪವನ್ನು ಚೆನ್ನಾಗಿ ನೋಡಿ, ಅದು ಜ್ಞಾನಸ್ವರೂಪವೆಂದೂ, ಹೀಗೇ ಎಲ್ಲಾ ಆತ್ಮರೂ ಇರುವರೆಂದೂ, ಆದ್ದರಿಂದ ಎಲ್ಲರೂ ಏಕರೀತಿಯವರೆಂದೂ ತಿಳಿಯುತ್ತಾನೆ.
2. ಹೀಗಿರುವ ಆತ್ಮರಿಗೆ ಶರೀರಗಳು ಹೇಗೆ ಬಂದವು ಎಂದು ಯೋಚಿಸಿ, ಅವು ಕರ್ಮಗಳಿಂದ ಬಂದವೆಂದೂ, ಕರ್ಮ ಕಳೆದರೆ ಭಗವಂತನಂತೆ ಜೀವಾತ್ಮರೂ ಶುದ್ಧರಾಗಿ ಆಗುವರು ಎಂದರಿತು, ಭಗವಂತನೂ ಜೀವಾತ್ಮರೂ ಒಂದೇ ಬಗೆಯವರೆಂದು ಎಣಿಸುವನು. ಇದು ಎರಡನೇಯ ಮೆಟ್ಟಲು.
3. ಮೂರನೇಯ ಮೆಟ್ಟಲಲ್ಲಿ, ಈ ಎರಡೂ ಜ್ಞಾನಗಳು ಯೋಗ ಮಾಡದ ಸಮಯದಲ್ಲೂ ಬರುವುವು. ಬಿಟ್ಟು ಹೋಗವು.
4. ನಾಲ್ಕನೇಯ ಮೆಟ್ಟಿಲಲ್ಲಿ, ತನಗೆ ಬರುವ ಸುಖ, ದುಃಖಗಳಲ್ಲಿ ಬೇರೆ ಆತ್ಮರಿಗೆ ಹೇಗೆ ಸಂಬಂಧವಿಲ್ಲವೋ, ಹಾಗೇ ತನಗೂ ಸಂಬಂಧವಿಲ್ಲದೆ ಮನಸ್ಸು ಚಲಿಸದೆ ಇರುವನು. (ಶ್ಲೋಕಗಳು 6-29 ರಿಂದ 32). ಹೀಗೇ ಬಲಿತ ಆತ್ಮಜ್ಞಾನವು ಎಲ್ಲ ಪಾಪಗಳನ್ನೂ ಹೋಗಿಸುವುದೆಂದು 4-36, 37, 38 ಶ್ಲೋಕಗಳಲ್ಲಿ ಸ್ತುತಿಸಿದೆ. ಪಾಪಗಳೆಂದರೆ, ಭಗವಂತನ ಧ್ಯಾನಕ್ಕೆ ಅಡಚಣೆಗಳೆಂದು ಅರ್ಥ.

ಈ ಕರ್ಮಯೋಗವನ್ನು ಎಲ್ಲರೂ ಮಾಡಿ ಆತ್ಮನನ್ನು ಇದ್ದಂತೆ ಕಂಡು ಏಕೆ ಸಂತೋಷಿಸುತ್ತಿಲ್ಲ ಎಂದರೆ, ಈ ಲೋಕದಲ್ಲೇ ಅನುಭವಿಸುವ ಚಿಕ್ಕ ಫಲಗಳಲ್ಲಿ ಆಸೆಯಿಂದ ಬೇರೆ ದೇವತೆಗಳ ಬಳಿ ಹೋಗುವರು. ಈ ಆಸೆಯೇ ಕರ್ಮಯೋಗ ಆರಂಭಿಸಲು ತಡೆ. ಈ ತಡೆ ನೀಗಿ ಕರ್ಮಯೋಗ ಪ್ರಾರಂಭಿಸಲು ಶ್ರೀಕೃಷ್ಣ ದಾರಿ ಹೇಳುವನು. ಅದೇನೆಂದರೆ, ಭಗವಂತ ಜಗತ್ತನ್ನು ಸೃಷ್ಟಿಸುವಾಗ ಒಬ್ಬ ಮೇಲಾಗಿಯೂ, ಮತ್ತೊಬ್ಬ ಕೀಳಾಗಿಯೂ ಇರುವಂತೆ ಮಾಡುವನು. ಈ ಬೇರ್ಪಾಡಿಗೆ ಕಾರಣ ಆಯಾ ಜೀವಾತ್ಮರ ಕರ್ಮಗಳು. ಭಗವಂತ ಎಲ್ಲರಿಗೂ ಸಮಾನ. ಅವನಿಗೆ ಈ ಪಕ್ಷಪಾತ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಇದನ್ನು ಒಬ್ಬ ಅರಿತರೆ, ನಮ್ಮ ಪಾಪಗಳಿಂದಲೇ ನಾವು ಹೀಗಿದ್ದೇವೆ, ಇದನ್ನು ಹೇಗೆ ನಿವಾರಿಸಿ ಕೊಳ್ಳುವುದೆಂಬ ಚಿಂತೆ ಬಂದು, ಅದರ ಪರಿಹಾರಕ್ಕಾಗಿ ಕರ್ಮಯೋಗದಲ್ಲಿ ತೊಡಗುವನು. (4-12, 13, 14 ಶ್ಲೋಕಗಳು). ಈ ಕರ್ಮಯೋಗದಿಂದ ಭಗವಂತ ಪ್ರೀತಿ ಹೊಂದುವನೆಂದೂ, ಆವನು ಎಲ್ಲ ಲೋಕಗಳಿಗೆ ರಾಜರಾಗಿರುವವರಿಗೂ ರಾಜನಾಗಿದ್ದೂ, ಎಲ್ಲರಲ್ಲಿಯೂ ಬಹಳ ಸ್ನೇಹವುಳ್ಳವನೆಂದು ಅರಿತರೆ, ಅದನ್ನು (ಕರ್ಮಯೋಗವನ್ನು) ಸುಲಭವಾಗಿ ಮಾಡಿ ಮುಗಿಸುವನು. ನಾಲ್ಕನೇಯ ಅಧ್ಯಾಯದ ಐದನೇಯ ಶ್ಲೋಕದಿಂದ ಏಳು ಶ್ಲೋಕಗಳಲ್ಲಿ ಹೇಳಿರುವ ಭಗವಂತನ ಅವತಾರಗಳ ರಹಸ್ಯವನ್ನೂ ಅರಿತರೆ, ಇದನ್ನು ಇನ್ನೂ ಚೆನ್ನಾಗಿ ಸಾಧಿಸಬಹುದು.

ಕೆಲವರು, ಪ್ರಪತ್ತಿ ಮಾಡಿ ಈ ಜನ್ಮದ ಕೊನೆಯಲ್ಲಿಯೇ ಮೋಕ್ಷ ಪಡೆಯುವವರು, ಏತಕ್ಕೆ ಕರ್ಮಯೋಗ ಮಾಡಬೇಕೆಂದು ಕೇಳುವರು. ಅದಕ್ಕೆ ಉತ್ತರ - ಕರ್ಮಯೋಗವನ್ನು ಮಾಡುವುದು ಬೇಡ. ಆದರೆ, ಅವರು ಮಾಡುವ ನಿತ್ಯಕರ್ಮಗಳನ್ನು ಭಗವಂತ ಹೇಳಿದ ಎರಡು ಭಾವನೆಗಳೊಡನೆ ಮಾಡಿದರೆ, ವಿಷಯಗಳಲ್ಲಿ ವಿರಕ್ತಿ ಬಂದು, ಆತ್ಮಜ್ಞಾನ ನೆಲೆಸಿ, ಭದವಂತನಿಗೆ ಮಾಡುವ ಸೇವೆಗಳನ್ನು ಪ್ರೀತಿಯಿಂದ ಮಾಡಿ, ಭಗವಂತನನ್ನು ಸಂತೋಷಪಡಿಸಿ ತಾವೂ ಸಂತೋಷದಿಂದಿರಬಹುದು. ಭಗವದಾಜ್ಞಯಾ, ಭಗವತ್ಪ್ರೀತ್ಯರ್ಥಂ ಎಂಬ ಶಬ್ದಗಳನ್ನು ಮಾತ್ರ ಹೇಳಿ, ಆ ಭಾವನೆಗಳಿಲ್ಲದಾಗ ಸ್ವರೂಪಜ್ಞಾನವಿಲ್ಲವೆಂದಾಗುವುದು.

ಏಳನೇಯ ಅಧ್ಯಾಯದಿಂದ ಆರು ಅಧ್ಯಾಯಗಳಲ್ಲಿ ಭಕ್ತಿಯೋಗ ಹೇಳಲ್ಪಟ್ಟಿದೆ. ಅವುಗಳಲ್ಲಿ ಏಳನೇಯ ಅಧ್ಯಾಯದಲ್ಲಿ ಭಗವಂತನ ಬಗ್ಗೆ ತಿಳಿಯಬೇಕಾದ ವಿಷಯಗಳನ್ನು ಹೇಳಿದೆ. ಅವೆಂದರೆ - ಜಗತ್ತಿನಲ್ಲಿರುವ ಎಲ್ಲ ಜ್ಞಾನವಿಲ್ಲದ ಮತ್ತು ಜ್ಞಾನವುಳ್ಳ ವಸ್ತುಗಳೂ ಭಗವಂತನ ಸ್ವತ್ತು. ಅವನೇ ಅವುಗಳ ಒಳಗೆ ಪ್ರವೇಶಿಸಿದ್ದು ಅವನ್ನು ಧರಿಸುವನು. ಹೀಗೆ ಧರಿಸಿ, ಅವನ್ನು ನಿಯಮಿಸುವನು (ಪ್ರೇರೇಪಿಸುವನು). ಇದನ್ನು ಹತ್ತನೇಯ ಅಧ್ಯಾಯದಲ್ಲಿ ಹೇಳುವನು. ಯಾವ ವಸ್ತುವನ್ನು

ಜ್ಞಾನವುಳ್ಳ ಒಬ್ಬ ಧರಿಸಿ (ಎತ್ತಿ ಹಿಡಿದು), ಪ್ರೇರಿಸಿ, ತನ್ನ ಪ್ರಯೋಜನಕ್ಕಾಗಿ ಬಳಸುವನೋ, ಅವನನ್ನು ಆತ್ಮ ಎಂದೂ, ಆ ವಸ್ತುವನ್ನು ಶರೀರವೆಂದೂ ಹೇಳುತ್ತೇವೆ. ಈ ಮೂರು ಅಂಶಗಳೂ ಯಾವಾಗಲೂ ಇರಬೇಕು. ಆದ್ದರಿಂದ ಭಗವಂತ ಎಲ್ಲ ವಸ್ತುಗಳಿಗೂ ಆತ್ಮ. ಎಲ್ಲವು ಅವನ ಶರೀರ. ಎಲ್ಲ ವಸ್ತುಗಳೂ ಅವನಿಂದ ಉಂಟಾಗುತ್ತವೆ. ಪ್ರಳಯಸಮಯದಲ್ಲಿ ಅವನಲ್ಲೇ ಅಡಗಿ ಹೋಗುತ್ತವೆ. ಹೀಗೇ ಎಲ್ಲಕ್ಕಿಂತಲೂ ಅವನು ಬಹಳ ಶ್ರೇಷ್ಠನು. ಹಾಗೆಯೇ ಶ್ರೇಷ್ಠ ಗುಣಗಳಿಂದಲೂ ಬಹಳ ಉತ್ತಮನು. ಅವನ ಗುಣಗಳಿಗೆ ಎಲ್ಲೆಯಿಲ್ಲ ಮತ್ತು ಅವುಗಳ ಮಹಿಮೆಗೂ ಅಳತೆಯಿಲ್ಲ. (ಶ್ಲೋ. 7-4 ರಿಂದ 7-12). ಇಂತಹ ಭಗವಂತನನ್ನು ಜನಗಳು ಅರಿತುಕೊಳ್ಳಲಿಲ್ಲ. ಏಕೆಂದರೆ, ಪ್ರಕೃತಿಯಿಂದುಂಟಾದ ವಸ್ತುಗಳಿಂದ ಮೋಹಿತರಾಗಿರುವುದರಿಂದ. ಹೀಗೆ ಮೋಹಗೊಳಿಸುವಂತೆ ಆ ವಸ್ತುಗಳನ್ನು ಭಗವಂತನೇ ಮಾಡಿರುವನು. ಅವನೇ ಆ ಮೋಹವನ್ನೂ ನೀಗಿಸಬೇಕು. ಅವನನ್ನು ಪ್ರಾರ್ಥಿಸಿದರೆ ಅವನು ನೀಗಿಸುವನು. ಬಹಳ ಪುಣ್ಯಶಾಲಿಗಳು ಅವನಲ್ಲಿ ಮೊರೆಯಿಟ್ಟು ಅವನನ್ನು ಪಡೆಯುತ್ತಾರೆ. ಅದರಲ್ಲಿ, ಹಣಕ್ಕಾಗಿ ಕೆಲವರು, ಇನ್ನಿತರರು ಜನ್ಮ, ಮರಣವಿಲ್ಲದೆ, ಸ್ವಾತ್ಮಸ್ವರೂಪಾನುಭವಕ್ಕೆ ಮತ್ತು ಇನ್ನೂ ಕೆಲವರು ಭಗವಂತನನ್ನೇ ಪರಮಪ್ರಯೋಜನವಾಗಿ ಎಣಿಸಿ, ಅಲನಲ್ಲಿಯೇ ಭಕ್ತಿಯಿಂದ, ಯಾವಾಗಲೂ ಅವನೊಡನೆಯೇ ಇರುವುದಕ್ಕಾಗಿ. ಕೊನೆಯಲ್ಲಿ ಹೇಳಿದವರುನ್ನು ಜ್ಞಾನೀ ಎಂದು ಹೇಳಿ ಜ್ಞಾನಿಗಳು ಸಿಗುವುದು ಬಹಳ ವಿರಳ ಎಂದು ಮುಗಿಸಿರುವನು.

ಎಂಟನೇಯ ಅಧ್ಯಾಯದಲ್ಲಿ, ಜ್ಞಾನಿಯು ಭಗವಂತನನ್ನು ಹೇಗೆ ಧ್ಯಾನ ಮಾಡಬೇಕೆಂದೂ, ಹೇಗೆ ಧ್ಯಾನಿಸುವನೋ ಹಾಗೇ ಅಂತಿಮ ಕಾಲದಲ್ಲಿ ಸ್ಮರಣೆ ಬರುತ್ತದೆಂದೂ, ಬೆಳಕಿನ (ಅರ್ಚಿರಾದಿ) ಮಾರ್ಗದಿಂದ ಜ್ಞಾನಿಯು ಭಗವಂತನನ್ನು ಪಡೆಯುವನೆಂದೂ, ಅಂತಹ ಪ್ರಾಪ್ತಿಯ ನಂತರ ಸಂಸಾರಕ್ಕೆ ಹಿಂತಿರುಗುವುದಿಲ್ಲವೆಂದೂ ಹೇಳಿದೆ. ನೆರಳಿನ ಮಾಹಾತ್ಮ್ಯ ಬಿಸಿಲಲ್ಲಿ ಹೋದಾಗ ಅರಿಯಬಹುದೆಂಬಂತೆ, ಜ್ಞಾನಿಯ ಮಹಿಮೆಯನ್ನು ತೋರಿಸಲು, ಹಣ ಬೇಕೆಂದು ಭಗವಂತನನ್ನು ಹೊಂದುವವನು ಹೇಗೆ ಧ್ಯಾನ ಮಾಡಬೇಕೆಂದೂ, ಆತ ಕತ್ತಲ ಮಾರ್ಗದಿಂದ ಚಂದ್ರನ ವರೆಗೆ ಹೋಗಿ ಹಿಂತಿರುಗುವನೆಂದೂ ಹೇಳಿರುವನು.

ಒಂಭತ್ತನೇಯ ಅಧ್ಯಾಯದಲ್ಲಿ ಭಗವಂತನ ಬಗ್ಗೆ ಹೇಳಿದ್ದರ ವಿಶದೀಕರಣ 4 ರಿಂದ 7 ಶ್ಲೋಕದ ವರೆಗೂ, ಜ್ಞಾನಿಯ ಮಾಹಾತ್ಮ್ಯವನ್ನು ಮತ್ತೆ 11 ರಿಂದ 25 ನೇಯ ಶ್ಲೋಕದ ವರೆಗೂ ಹೇಳಿ, ಮಿಕ್ಕ ಶ್ಲೋಕಗಳಿಂದ ಭಕ್ತಿಯೋಗವನ್ನು ಮಾಡೆಂದು ವಿಧಿಸಿ, ಅದರ ಸ್ವರೂಪ (ಲಕ್ಷಣ) ವನ್ನೂ, ಅದರ ಅಂಗಗಳನ್ನೂ ಹೇಳುತ್ತಾನೆ. ಅಂಗಗಳಾದರೋ - ಯಾವ ಕೆಲಸವನ್ನು ಮಾಡಿದರೂ (ವೇದದಲ್ಲಿ ಹೇಳಿದ ಕ್ರಿಯೆಗಳೋ ಅಥವಾ ಲೌಕಿಕ ವ್ಯವಹಾರಗಳೋ) ಅವೆಲ್ಲವೂ ಭಗವಂತನ ಪ್ರೀತಿಗಾಗಿಯೇ ಎಂದು ಮಾಡುವುದು. (ಶ್ಲೋ. 27, 28). ಭಗವಂತನಲ್ಲಿ ಸಂಕೋಚವಿಲ್ಲದೆ ಎಲ್ಲರೂ ಹೋಗಬಹುದು ಎಂಬುದಕ್ಕಾಗಿ, ಅವನು ಬಹಳ ಸುಲಭ, ಪ್ರೀತಿಯಿಂದ ಏನನ್ನು ಕೊಟ್ಟರೂ ಸ್ವೀಕರಿಸುವನು, ಪ್ರೀತಿಯಿಂದ ಎಷ್ಟೇ ಕೀಳಾದವನು ಹತ್ತಿರ ಹೋದರೂ ಅವನನ್ನು ಸೇರಿಸಿ ಕೊಳ್ಳುವನೆಂದೂ ಹೇಳಲಾಗಿದೆ.

ಹತ್ತನೇಯ ಅಧ್ಯಾಯದಲ್ಲಿ ಭಗವಂತನಲ್ಲಿ ಪ್ರೀತಿ ಮೂಡುವುದಕ್ಕೂ, ಉಂಟಾದ ಪ್ರೀತಿ ಬೆಳೆಯುವುದಕ್ಕೂ ಉಪಾಯ ಹೇಳಲಾಗಿದೆ. ಜಗತ್ತಿನಲ್ಲಿ ಯಾರೆಲ್ಲಾ ಉತ್ತಮರೋ ಮತ್ತು ಯಾವ ಯಾವ ವಸ್ತು ಉತ್ತಮವೋ ಅವೆಲ್ಲಾ ಭಗವಂತನಿಗೆ ಒಳಪಟ್ಟದ್ದು. ಇಂತಹ ಭಗವಂತ, ನಾವು ಯಾವಾಗ ಅವನನ್ನು ಧ್ಯಾನ ಮಾಡುತ್ತೇವೋ ಎಂದು ನಮ್ಮ ಕುತ್ಸಿತವಾದ ಹೃದಯಸ್ಥಾನದಲ್ಲಿ ಬಂದು ನೆಲೆಸಿರುವನೆಂದು ತಿಳಿಯಬೇಕು. ಇದನ್ನರಿತರೆ ಯಾರಿಗಾದರೂ ಭಕ್ತಿ ಉಂಟಾಗುವುದು.

ಹನ್ನೊಂದನೇಯ ಅಧ್ಯಾಯದಲ್ಲಿ, ತಾವು ಹೇಳಿದಂತೆ ತಮ್ಮನ್ನು ಕಾಣಬೇಕೆಂದು ಅರ್ಜುನ ಶ್ರೀಕೃಷ್ಣನನ್ನು ಕೇಳಲು, ಭಗವಂತ ತನ್ನ ವಿಶ್ವರೂಪವನ್ನು ತೋರಿಸಿದನು. ಭಕ್ತಿಯೋಗ ಮಾಡುವ ಜ್ಞಾನಿಗೂ ಭಗವಂತನನ್ನು ನೋಡಬೇಕೆಂಬ ತೀವ್ರ ಇಚ್ಛೆ ಉಂಟಾದಾಗ, ಕೂಡಲೇ ತನ್ನನ್ನು ತೋರಿಸುವನೆಂದು ಇದರಿಂದ ಅರಿಯಬಹುದು.

ಹನ್ನೆರಡನೇಯ ಅಧ್ಯಾಯದಲ್ಲಿ ಜೀವಾತ್ಮಸ್ವರೂಪವನ್ನು ಧ್ಯಾನಿಸಿ ಅದನ್ನು ನೋಡುವುದಕ್ಕಿಂತ ಭಗವಂತನ ಧ್ಯಾನ ಮಾಡಿ ಅವನನ್ನು ಪಡೆಯುವುದು ಬಹಳ ಬೇಗ ಸಾಧ್ಯ ಎಂದೂ ಹೇಳಿ ಭಕ್ತಿಯೋಗದ ಉಪದೇಶವನ್ನು ಮುಗಿಸಿದೆ.

ಕೊನೆಯ ಆರು ಅಧ್ಯಾಯಗಳಲ್ಲಿ ಕೆಳಗಿನ ಅಧ್ಯಾಯಗಳಲ್ಲಿ ಹೇಳಿದ ಕೆಲವು ವಿಷಯಗಳ ವಿಸ್ತೃತ ಸ್ಪಷ್ಟೀಕರಣವಿದೆ, ಇದರಲ್ಲಿ, ಮೊದಲ ಮೂರು ಅಧ್ಯಾಯಗಳು (13, 14, 15) ಮೂರು ತತ್ತ್ವಗಳ (ಚೇತನ, ಅಚೇತನ, ಈಶ್ವರ) ಬಗ್ಗೆಯೂ, ಬಾಕಿ ಮೂರು ಅಧ್ಯಾಯಗಳು (16, 17, 18) ಕರ್ಮಗಳನ್ನು ಮಾಡಬೇಕಾದ್ದರ ಬಗ್ಗೆಯೂ ಹೇಳುತ್ತವೆ.
2ನೇಯ ಅಧ್ಯಾಯದಲ್ಲಿ ಜೀವಾತ್ಮನೂ ಶರೀರವೂ ಬೇರೆ ಬೇರೆ ಎಂದು ಕೆಲವು ಕಾರಣಗಳಿಂದ ಹೇಳಲಾಯಿತು. ಇದನ್ನೇ 13ನೇಯ ಅಧ್ಯಾಯದಲ್ಲಿ ಹಲವು ಕಾರಣಗಳಿಂದ ದೃಢಪಡಿಸಿ, ಜೀವಸ್ವರೂಪವನ್ನೂ, ದೇಹಸ್ವರೂಪವನ್ನೂ, ಜೀವಸ್ವರೂಪವನ್ನು ನೋಡಲು ಬೇಕಾದ ಗುಣಗಳನ್ನೂ ವಿಸ್ತರಿಸಿ ಹೇಳಲಾಗಿದೆ.

14ನೇಯ ಅಧ್ಯಾಯದಲ್ಲಿ ಶರೀರದಲ್ಲಿರುವ ಸತ್ತ್ವ, ರಜಸ್, ತಮಸ್ ಎಂಬ ಗುಣಗಳ ಕೆಲಸಗಳನ್ನೂ, ಆ ಗುಣದಳೊಡನೆ ಕೂಡಿರುವ ಶರೀರದ ಸಂಬಂಧ ಕಳೆಯಲು ದಾರಿಯನ್ನೂ ಹೇಳಿದೆ.

15ನೇಯ ಅಧ್ಯಾಯದಲ್ಲಿ ಭಗವಂತನು, ಸಂಸಾರದಲ್ಲಿರುವ (ಬದ್ಧ) ಚೇತನನಿಗಿಂತನೂ, ಸಂಸಾರವನ್ನು ತ್ಯಜಿಸಿದವ (ಮುಕ್ತ) ನಿಗಿಂತಲೂ ತಾನು ಬೇರಾದವನು (ವಿಲಕ್ಷಣನು) ಎಂದೂ, ಎಲ್ಲರಿಗಿಂತಲೂ ಶ್ರೇಷ್ಠನೆಂದೂ (ಪುರುಷೋತ್ತಮ) ಹೇಳಿದೆ. ಇದಕ್ಕಾಗಿ ಸಂಸಾರವನ್ನು ಅಶ್ವತ್ಥ ವೃಕ್ಷವಾಗಿ ಹೇಳಿ, ಆಸೆಯಿಲ್ಲದಿರುವಿಕೆ ಎಂಬ ಕತ್ತಿಯಿಂದ ಅದನ್ನು ಕತ್ತರಿಸಿ, ಭಗವಂತನನ್ನು ಪಡೆಯಬೇದೆಂದೂ, ತಾನು ಎಲ್ಲವನ್ನೂ ನಿಯಮಿಸುವವನೆಂದೂ ಹೇಳುತ್ತಾನೆ.

16ನೇಯ ಅಧ್ಯಾಯದಲ್ಲಿ ಜನಗಳನ್ನು ಎರಡು ಬಗೆಯಾಗಿ ವಿಂಗಡಿಸಿ, ಒಂದು ಬಗೆಯವರು ಭಗವಂತನಿಗೆ ತಾವು ಅಧೀನರೆಂದು ತಿಳಿದು, ಅವನೇ ಎಲ್ಲ ಕೆಲಸಗಳನ್ನೂ ಮಾಡಿಸುವನೆಂದು ಎಣಿಸುವುದು ಮುಂತಾದವುಗಳಿಂದ ದೈವಸ್ವಭಾವದವರೆಂದೂ, ಮತ್ತೊಂದು ಬಗೆಯವರು ಇದನ್ನು ಅರಿಯದೆ, ತಾವೇ ಎಲ್ಲ ಕೆಲಸಗಳನ್ನೂ ಮಾಡುವುದಾಗಿ ಭಾವಿಸುವುದು ಮುಂತಾದವುಗಳಿಂದ ಆಸುರಸ್ವಭಾವದವರೆಂದೂ ತೋರಿಸಿ, ಅವರುಗಳ ಕೆಲಸಗಳನ್ನು 7ರಿಂದ 18ನೇಯ ಶ್ಲೋಕದ ವರೆಗೆ ಹೇಳಿ, ಅವರನ್ನು ತಾನು ನರಕದಲ್ಲಿ ತಳ್ಳುವುದಾಗಿ ಹೇಳುತ್ತಾನೆ. ಇದನ್ನು ಓದುವ ನಾವು ಆಸುರಭಾವದಿದಂದಿದ್ದೇವೆ ಎಂದು ನೋಡಿ, ಆಸೆ, ಕೋಪ, ಲೋಭಗಳನ್ನು ಬಿಟ್ಟು, ಶಾಸ್ತ್ರಗಳಲ್ಲಿ ಹೇಳಿದ್ದನ್ನೇ ಮಾಡಬೇಕು.
2ನೇಯ ಅಧ್ಯಾಯದಲ್ಲಿ ಹೇಳಿದ ಎರಡು ಭಾವನೆಗಳೊಡನೆ ಕರ್ಮಗಳನ್ನು ಮಾಡಬೇಕೆಂದು ಹೇಳಿದೆ. ಹಾಗೆ ಮಾಡುವವನು (ಸಾತ್ವಿಕ) ಸತ್ವಗುಣ ಹೆಚ್ಚಿದವನೆಂದೂ, ಆ ಕರ್ಮಗಳು ಸಾತ್ವಿಕಗಳೆಂದೂ ತೋರಿಸಲು,
ಕರ್ಮಗಳನ್ನು ಮಾಡುವವರನ್ನೂ, ಅವರುಗಳ ಕರ್ಮಗಳನ್ನೂ, ಅವರುಗಳು ಕರ್ಮಗಳನ್ನು ಮಾಡುವಾಗಿನ ಬುದ್ಧಿಯನ್ನೂ, ನಿಷ್ಠೆಯನ್ನೂ, ಅವರುಗಳು ಪಡೆಯುವ ಸುಖವನ್ನೂ, ಇದು ಮುಂತಾದವುಗಳನ್ನು ಸಾತ್ವಿಕ, ರಾಜಸ, ತಾಮಸ ಎಂದು ಮೂರು ಬಗೆಯಾಗಿ ವಿಂಗಡಿಸಿ, 17 ಮತ್ತು 18 ನೇಯ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಹೇಳಿದೆ.
ಕೊನೆಯಲ್ಲಿ 45ರಿಂದ 55ನೇಯ ಶ್ಲೋಕದ ವರೆಗೆ ಶ್ರೀಗೀತೆಯಲ್ಲಿ ಹೇಳಿದ ವಿಷಯಗಳ ಸಂಗ್ರಹ ಮಾಡಿದೆ. ಅಂದರೆ, ಕರ್ಮಯೋಗ ಮಾಡುವುದು, ಆತ್ಮಜ್ಞಾನ ಸ್ಥಿರವಾಗಿರುವುದು, ಜೀವಾತ್ಮನನ್ನು ಧ್ಯಾನಿಸುವುದು, ಅದರಿಂದ ಭಗವಂತನಲ್ಲಿ ಪರಭಕ್ತಿ ಮೂಡುವುದು, ಪರಜ್ಞಾನದಿಂದ ಭಗವಂತನನ್ನು ಕಾಣುವುದು, ಭಗವಂತನನ್ನು ಸೇರಬೇಕೆಂಬ ತೀವ್ರ ಆಸೆ ಪರಮಭಕ್ತಿ ಮತ್ತು ಭಗವಂತನ ಪ್ರಾಪ್ತಿ.

ಕಡೆಗೆ, ಬಹಳ ರಹಸ್ಯವಾದ ವಿಷಯವನ್ನು ನಿನಗೆ ತಿಳಿಸಿರುವೆ, ಇದನ್ನು ಚೆನ್ನಾಗಿ ಆಲೋಚಿಸಿ, ನಿನಗೆ ಯಾವುದು ಇಷ್ಟವೋ ಅದನ್ನು ಮಾಡು ಎಂದು ಭಗವಂತ ಹೇಳಿದ. ಕೂಡಲೆ ಅರ್ಜುನನ ಮುಖದಲ್ಲಿ ಚಿಂತೆ ಕಂಡಿತು. ಅವನು ಮೊದಲು ಜ್ಞಾನಯೋಗ ಮಾಡುವೆನೆಂದ. ಅವನೇ 12ನೇಯ ಅಧ್ಯಾಯದಲ್ಲಿ ಕರ್ಮಯೋಗ ಮಾಡಲು ಬೇಕಾದ ಗುಣಗಳ ಬಗ್ಗೆ ಶ್ರೀಕೃಷ್ಣ

ಹೇಳಿದ್ದನ್ನು ಕೇಳಿ, ಇದನ್ನು ನಾನು ಹೇಗೆ ಮಾಡಿಯೇನು?, ಇದನ್ನು ಮಾಡಿದರೂ ಭಕ್ತಿಯೋಗ ಹೇಗೆ ಮಾಡಕ್ಕಾದೀತು?, ಎಂದು ಚಿಂತೆ ಕಾಡಿತು. ಇದು ಭಗವಂತನಿಗೆ ಗೊತ್ತು. ಅದರೂ, ಮೇಲ್ನೋಟಕ್ಕೆ ನಿನ್ನಿಷ್ಟದಂತೆ ನಡೆ ಎಂದು ಹೇಳಿದ್ದಕ್ಕೆ ಶೋಕಿಸುವುದಾಗಿ ತೋರಿಸಿ, ಭಕ್ತಿಯೋಗವನ್ನೇ ಮಾಡು ಎಂದು ಮುಂದಿನ ಎರಡು ಶ್ಲೋಕಗಳಲ್ಲಿ ಹೇಳುತ್ತಾನೆ. ಆಗ ಅರ್ಜುನನ ದುಃಖ ಇಮ್ಮಡಿಯಾಯಿತು. ಇದನ್ನು ಗಮನಿಸಿ ಶ್ರೀಕೃಷ್ಣನು, ಮೋಕ್ಷಕ್ಕೆ ಲಘುವಾದ ಉಪಾಯವನ್ನು ತಿಳಿಸುವುದಕ್ಕೆ ಇವನು ಬಹಳ ಸೂಕ್ತ ಅಧಿಕಾರಿ ಎಂದು ಭಾವಿಸಿ, ಕೂಡಲೇ ಪ್ರಪತ್ತಿಯನ್ನು ಉಪದೇಶಿಸಿದನು. ಆಗ ಅವನಿಗೆ ೬೬ನೇಯದಾದ ಗೀತೋಪದೇಶದ ಚರಮ (ಕೊನೆಯ) ಶ್ಲೋಕದಲ್ಲಿ ಪ್ರಪತ್ತಿಯನ್ನು ಉಪದೇಶ ಮಾಡಿದನು. ಅದರ ಭಾವವಾದರೋ - "ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗವೆಂಬ ಉಪಾಯಗಳನ್ನು ಮಾಡಲಾರದೆ ದುಃಖಿಸುವ ನೀನು ನನ್ನನ್ನೇ ಶರಣು ಹೊಂದು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುತ್ತೇನೆ. ಶೋಕಿಸಬೇಡ" ಎಂದು. ಶೋಕಿಸಬೇಡ ಎಂದು ಹೇಳಿದ್ದರಿಂದ ಭಗವಂತನನ್ನು ಸೇರಲು ದಾರಿ ಇಲ್ಲವಲ್ಲಾ ಎಂದು ಯಾವನು ದುಃಖಿಸಿ ಅಳುವನೋ, ಅವನೇ ಇದನ್ನು ಮಾಡತಕ್ಕವನೆಂದು ಸಿದ್ಧಿಸುತ್ತದೆ. ಪ್ರಪತ್ತಿ ಬಗ್ಗೆ ಅರಿಯ ಬೇಕಾದ ವಿಷಯಗಳನ್ನು ಈ ಶ್ಲೋಕದ ಭಾಷ್ಯದಲ್ಲಿ ನೋಡಬಹುದು.

ಹೀಗೆ ಭಗವದ್ರಾಮಾನುಜರ ಶ್ರೀಗೀತಾಭಾಷ್ಯದ ಬಗ್ಗೆ ಒಂದು ವಿಹಂಗಮ ನೋಟ ಪ್ರಸ್ತಾವಿಸಲಾಗಿದೆ. ಅವರ ಗಂಭೀರವಾದ ಅರ್ಥ ವ್ಯಾಖ್ಯಾನ ಶೈಲಿ, ಬಳಸಿರುವ ಪದಗಳ ಸೊಬಗು, ನ್ಯಾಯ, ವ್ಯಾಕರಣ, ಮೀಮಾಂಸಾದಿ ಶಾಸ್ತ್ರಗಳ ಪರಿಚಯದಿಂದ ಸಿದ್ಧಾಂತವನ್ನು ಸ್ಥಾಪಿಸುವ ವೈಖರಿ, ಪೂರ್ವಾಚಾರ್ಯರ ಸೂಕ್ತಿಗಳನ್ನು ಅನುಸರಿಸುವುದು, ಭಗವಂತನಲ್ಲಿ ಅನನ್ಯವಾದ ಭಕ್ತಿ, ಅವನ ಮತ್ತು ಭಾಗವತರ ಕೈಂಕರ್ಯದಲ್ಲಿ ತೀವ್ರ ಅಭಿರುಚಿ, ಲೋಕಕ್ಷೇಮದಲ್ಲಿ ಕಾಳಜಿ, ತತ್ತ್ವ, ಹಿತ, ಪುರುಷಾರ್ಥಗಳೆಂಬ ಮೂರು ಅಂಶಗಳನ್ನು ವಿಶದವಾಗಿ ಪ್ರತಿಪಾದಿಸಿರುವ ಬಗೆ, ಶಾಂಕರ, ಭಾಸ್ಕರ, ಯಾದವರೆಂಬ ಮೂರು ವಿಧವಾದ ಅದ್ವೈತ ಸಿದ್ಧಾಂತಿಗಳ ವಾದಗಳ ಪ್ರಾಮಾಣಿಕವಾದ ನಿರಾಕರಣೆ ಮುಂತಾದವು ಅತ್ಯಂತ ಶ್ಲಾಘನೀಯಗಳು. ಆದರೆ, ಈಗಿನ ಸಂದರ್ಭದಲ್ಲಿ ಇಷ್ಟು ಸೂಕ್ಷ್ಮಪರಿಚಯದೊಡನೆ ಈ ಲೇಖನವನ್ನು ಮುಕ್ತಾಯ ಮಾಡುವೆವು.

ವಕ್ತಾ ಶ್ರೋತಾ ವಚನವಿಷಯಃ ಪ್ರೀಯತಾಂ ಭಗವಾನ್ ವಾಸುದೇವಃ

ಶುಭಮಸ್ತು.